ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 45/2019 .

ಪ್ರಾ.ಸಾ. : 4
ಚಾ.ಸಾ. : 5

| | | |
|---|---|---|
| ಹೆಸರು | : | ಹರೀಶ್ ಎನ್ ಇ. |
| ತಂದೆಯ ಹೆಸರು | : | ಈರಪ್ಪ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಬಿರುನಾಣಿ |

... ............................................................................................................ ...

ದಿನಾಂಕ 08 ನೇ ಜನವರಿ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿಯು ಗುರುತಿಸಿರುವ ದಾಖಲೆಯು ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿ ಪಿ 2 ಎಂದು ಈಗಾಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿ ನಿ ಪಿ 2 ಸಿ ಎಂದು ಗುರುತಿಸಲಾಯಿತು. ದಿ. 07.02.2018 ರಲ್ಲಿ ಸದರಿ ಸಹಿಯನ್ನು ಬಿರುನಾಣಿ ಗ್ರಾಮದಲ್ಲಿ, ಕಾಫಿ ಕಣದಲ್ಲಿ ಮಾಡಿರುತ್ತೇನೆ. ಚಾಸಾ 1 ರವರು ಕರೆದ ಮೇರೆಗೆ ಸದರಿ ಸ್ಥಳಕ್ಕೆ ಹೋಗಿರುತ್ತೇನೆ. ಮುತ್ತಣ್ಣ ಹಾಗೂ ಪೊಲೀಸರು ಹಾಜರಿದ್ದರು. ಕಾಫಿ ದೊಣ್ಣೆಯನ್ನು ಅಮಾನತುಪಡಿಸಿದರು.

ಪಾಟೀ ಸವಾಲು :- ಆರೋಪಿ 1 ರವರಿಂದ :-

ಚಾಸಾ 1 ನಮ್ಮ ಪಕ್ಕದ ಮನೆಯವರು ಎಂದರೆ ಸರಿ. ಚಾಸಾ 1 ಮಧ್ಯ ವ್ಯವಹಾರ ಮಾಡುತ್ತಾರೆ ಹಾಗೂ ಕೃಷಿಕರು ಎನ್ನುತ್ತಾರೆ. ಬಾರ್ ಚಾಸಾ 1 ರವರ ಹೆಸರಿನಲ್ಲಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮರದ ಮಿಲ್ ಚಾಸಾ 1 ರವರಿಗೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಕಾಫಿ ಬೆಳೆಗಾರ ಎಂದರೆ ಸರಿ. 1 ಎಕರೆಗೆ ಅಂದಾಜು 400 ಕಾಫಿ ಗಿಡ

ನೆಡಬಹುದು ಎನ್ನುತ್ತಾರೆ. 1 ವರೆ ಎಕರೆ ಜಾಗದಲ್ಲಿ 600 ಕಾಫಿ ಗಿಡ ನೆಡಬಹುದು ಎಂದರೆ ಸರಿ. ನಾನು ಕಾಫಿ ಕಣದಲ್ಲಿ ಸಹಿ ಮಾಡಿದ್ದೇನೆ, ಅಲ್ಲಿ ಯಾವುದೇ ಕಾಫಿ ಗಿಡ ಇರಲಿಲ್ಲ ಎನ್ನುತ್ತಾರೆ. ಚಾಸಾ 1 ದಾಖಲಾತಿ ಸೃಷ್ಟಿಸಿ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :- ಆರೋಪಿ 2 ಪರ ರವರಿಂದ :-**

ಮಹಜರ್‌ನಲ್ಲಿ ಬರೆದಿರುವ ವಿಚಾರ ಓದಿದ್ದೇನೆ. ಕಣದ ಸುತ್ತಳತೆಯನ್ನು ಮಹಜರ್‌ನಲ್ಲಿ ಬರೆದಿಲ್ಲ. ಚಾಸಾ 1 ಹಾಗೂ ಆರೋಪಿ 1 ರವರ ನಡುವೆ ಹಲವು ಪ್ರಕರಣಗಳು ಇದೆ ಎಂದರೆ ಸರಿ. ನಾನು ಎಲ್ಲ ಪ್ರಕರಣಗಳಲ್ಲಿ ಸಾಕ್ಷಿ ದಾರ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮಾತ್ರ ಸಾಕ್ಷಿ ದಾರ ಎನ್ನುತ್ತಾರೆ ಮಹಜರ್ ಸ್ಥಳದ ಚೆಕ್ಕು ಬಂದಿ ಗೊತ್ತಿಲ್ಲ. ಮಹಜರ್ ಸಮಯದಲ್ಲಿ ಫೋಟೋ ತೆಗೆದರು. ನಾನು ಮಹಜರ್ ಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ ಸ್ಥಳದಲ್ಲಿ ಅಮಾನತುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ :- - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)